# ಭೂಪಾಳೀ

(ಶ್ರೀ ರಾಮಚಂದ್ರ ಸೀತಾರಾಮ ದೇವ ಇವರು ೬-೭-೧೯೨೫ ರ ಬೆಳಿಗ್ಗೆ ಸ್ವರಚಿತವಾದ ಈ ಪ್ರಾತಃ ಸ್ಮರಣೆಯನ್ನು ಹೇಳಿದರು)

ಏಳಿರಿ ಏಳಿರಿ ಎಲ್ಲ ಜನ । ಬನ್ನಿ ನೋಡುವ ಸಾಯಿ ಚರಣ ।
ಹರಿದು ಹೋಗುವದು ಭವಬಂಧನ । ಭಾವದಿ ನೋಡಲು ಚರಣ ||ಪ||
ಆದಾಗ ಅವರ ದರ್ಶನ । ತೃಪ್ತಿಯ ಹೊಂದುವುವು ನಯನ ।
ಭಾವದಿ ಸಾಷ್ಟಾಂಗ ನಮನ । ಮಾಡಿ ವಂದಿಸಿ ಚರಣ ||೧||
ಆ ಚರಣದಲಿ ಕೋಟಿತೀರ್ಥಗಳು । ಆ ಚರಣಕೊಂದಿಸಿ ಸದ್ಭಾವದೊಳು ।
ನಮಿಸಲು ಹಗಲು ರಾತ್ರಿಗಳಲೂ । ತಪ್ಪುವವು ಜನನ ಮರಣಗಳು ||೨||
ರೂಪವ ನೋಡಲು ಕಂಗಳಲಿ । ಬಹು ಸುಖ ಸಿಗುವುದು ಸಹಜದಲಿ ।
ಅಜ್ಞಾನ ಕಳೆದು ಕ್ಷಣದಲ್ಲಿ । ಜ್ಞಾನ ಜ್ಯೋತಿ ಬೆಳಗುವದಲ್ಲಿ ||೩||
ನೆನೆಯಿರಿ ಸಾಯಿನಾಥನನ್ನು । ನಾಲ್ಕಕ್ಷರದ ಈ ನಾಮವನ್ನು । ||೪||
ತಪ್ಪುವದು ಜನನ ಮರಣವದರಿಂದ । ಲಭಿಸುವುದು ತಪ್ಪದೆ ಮೋಕ್ಷಪದ
ಪರಬ್ರಹ್ಮವಿದು ಅವತರಿಸಿತು । ಅದಕೆ ಈ ನಾಮವ ಪಡೆಯಿತು ।
ಇನ್ನು ಮೊದಲು ನೆನೆಯಿರದನು । ಬಯಸುವರು ತಮ್ಮಯ ಸುಖವನ್ನು ||೫||
ಸಾಯಿ ನಾಮವೆ ಅಗ್ನಿ ಇಲ್ಲಿ । ಮಹತಾಪಗಳ ಕ್ಷಣದಲ್ಲಿ ।
ಹುಲ್ಲಿನೊಲು ಭಸ್ಮ ಮಾಡುತಲಿ । ಸ್ಮರಿಸಲು ಪ್ರಾತಃ ಕಾಲದಲಿ ||೬||
ಧರ್ಮಲೋಪವನು ಬೆಳೆದು ಅದಕೆ ಭೂ ಭಾರವು ಬೆಳೆದದ್ದು ।
ಅದಕೆ ಸಮರ್ಥ ಹುಟ್ಟಿ ಬಂದ । ಜಡ ಮೂಢರನುದ್ಧರಿಸಿದ ||೭||
ದರ್ಶನ ಬೆಳಗಿನಲಿ ಎದ್ದು । ಆದರೆ ಮುಕ್ತಿಯು ದೊರಕುವುದು ।
ತಪ್ಪುವದು ಜನನ ಮರಣವದರಿಂದ । ಭಾವದಿ ಪಡೆದ ದರ್ಶನದಿಂದ ||೮||
ರೂಪವದು ಸುಂದರ ಸುಕುಮಾರ । ಕಾಣುವದು ಅತಿಶಯ ಮನಮೋಹಕರ ।
ಅದನೇ ನೋಡುತಿರಲು ಸತ್ವರ । ನಿಮ್ಮಯ ಜೀವನ ಸಾರ್ಥಕ ||೯||
ಹೇಳುವನು ಸೀತಾರಾಮಸುತ । ಸಾಯಿಯ ನೋಡಿರಿ ಪ್ರೇಮಯುಕ್ತ ।
ಸಂದೇಹವಿದರಲಿ ಇಲ್ಲ । ತಾವಾಗುವಿರಿ ಜನ್ಮ ಮುಕ್ತ ||೧೦||

# ಶ್ರೀ ಸದ್ಗುರು ಸಾಯಿಬಾಬಾರವರ ಅಭಯವಾಣಿ

ಶಿರಡಿಯಲಿ ಯಾರು ಹೆಜ್ಜೆ ಊರುವರು । ಎಲ್ಲ ಅಪಾಯಗಳಿಂದ ದೂರಾದವರು ॥೧॥

ನನ್ನ ಸಮಾಧಿಯ ಮೆಟ್ಟಲೇರಿದವರ । ದುಃಖಗಳೆಲ್ಲ ದೂರಾಗುವವದರಿಂದ ॥೨॥

ನಾ ಬಿಟ್ಟು ಹೋದರೂ ಈ ಶರೀರವನು । ಭಕ್ತರಿಗಾಗಿ ನಾ ಓಡಿ ಬರುವೆನು ॥೩॥

ಹರಕೆಗೊಲಿಯುವದು ನನ್ನ ಸಮಾಧಿ । ನನ್ನಲ್ಲಿರಲಿ ನಿಮ್ಮಯ ದೃಢ ಬುದ್ಧಿ ॥೪॥

ಎಂದಿಗೂ ನಾ ಜೀವಿಸಿರುವೆ ತಿಳಿಯಿರಿದನು ಸತ್ಯ । ಪ್ರಚೀತಿ ಪಡೆಯಿರಿ ಅನುಭವದಿಂದ ನಿತ್ಯ ॥೫॥

ನನಗೆ ಶರಣು ಬಂದು ಬರಿಗೈಲಿ ಹೋದ । ಅಂಥವನೊಬ್ಬನ ತೋರಿಸಿರಿಂದ ॥೬॥

ಯಾರು ನನ್ನನ್ನು ಭಜಿಸುವರೆಂತೋ । ನಾನೊಲಿಯುವೆ ಅವರಿಗೆ ಅವರಂತೆ ॥೭॥

ಹೊರುವೆನು ನಾನು ನಿಮ್ಮ ಭಾರವನ । ಅನ್ಯ ಅಲ್ಲ ನನ್ನಯ ಈ ವಚನ ॥೮॥

ತಿಳಿಯಿರಿಲ್ಲಿ ಸಹಾಯ ಎಲ್ಲರಿಗಿರುವದು । ಬೇಡಿದುದೆಲ್ಲ ಇಲ್ಲಿ ಲಭಿಸುವುದು ॥೯॥

ಕಾಯಾವಾಚ ಮನದಿಂದ ನನ್ನವನಾದವಗೆ । ಎಲ್ಲ ಕಾಲದಲ್ಲೂ ಋಣಿಯಾಗಿರುವೆ ಅವಗೆ ॥೧೦॥

ಸಾಯಿ ಹೇಳುವ ಅವನೇ, ಅವನೇ ಆದ ಧನ್ಯ । ಆಗುವನಾರೋ ನನ್ನ ಚರಣದಲಿ ಅನನ್ಯ ॥೧೧॥

ಅಭಂಗ ಲೇಖಕ - ಶ್ರೀ ಮೋಹಿನೀರಾಜ ಪಂಡಿತ
ಪೆನ್‌ಶನರ್ ಮಾಮಲೇದಾರ ನಾಶಿಕ.

# ಅರಿಕೆ

ಈ "ಶ್ರೀ ಸಾಯಿ ಸಚ್ಚರಿತ್ರೆ"ಯ ಓವಿ ಬದ್ಧ ಕನ್ನಡ ಅನುವಾದಿತ ಗ್ರಂಥವನ್ನು ಸಮಸ್ತ ಕನ್ನಡಿಗರಿಗೆ, ವಿಶೇಷತಃ ಶ್ರೀ ಸಾಯಿ ಭಕ್ತರ ಕೈಗಿಡುವಾಗ ಅತ್ಯಂತ ಸಂತೋಷ ಹಾಗೂ ಸಂತೃಪ್ತಿ ಭಾವನೆಯಿಂದ ನನ್ನ ಮನಸ್ಸು ತುಂದಿಲವಾಗುತ್ತದೆ.

ಮೂಲತಃ ನಾನೇನು ಸಾಯಿ ಭಕ್ತಳಲ್ಲ, ಸಂಪ್ರದಾಯದವಳಲ್ಲ, ಬಾಬಾರ ಬಗ್ಗೆ ಹೆಚ್ಚು ಓದಿ ತಿಳಿದವಳೂ ಅಲ್ಲ. ಆದರೂ ಆ ಮಹಾಮಹಿಮ ಸಂತ, ನನ್ನಿಂದ ಈ ಗ್ರಂಥ ಕಾರ್ಯವನ್ನು ಮಾಡಿಸಿಕೊಂಡು ನನ್ನನ್ನು ಕೃತಾರ್ಥಳನ್ನಾಗಿಸಿದ್ದಾನೆ. ಶ್ರೀ ಸಾಯಿಬಾಬಾರ ಭಕ್ತರೆಲ್ಲರಿಗೂ ತಿಳಿದಂತೆ ಅವರ ಮಹಿಮೆ ಅಗಮ್ಯ, ಅಪಾರ, ಅತ್ಯಂತ ಸರಳ ಹಾಗೂ ಅರ್ಥಪೂರ್ಣ. ಈ ಮಹಿಮಾ ಘಟನೆಗಳೆಲ್ಲ ಆಶ್ಚರ್ಯಕರ, ಕಲ್ಪನಾತೀತ. ಹೀಗೆಯೇ ನನ್ನಿಂದ ಈ ಗ್ರಂಥ ರಚನೆಯಾದದ್ದು ಅಕಲ್ಪಿತ, ಸರಳ ಹಾಗೂ ಅರ್ಥಪೂರ್ಣ ಘಟನೆ.

ಮೊದಲಿನಿಂದಲೂ ಆಧ್ಯಾತ್ಮ ಸಂಬಂಧಿ, ಧರ್ಮ ಬೋಧಕ ಗ್ರಂಥ, ಸಾಹಿತ್ಯ, ಚರಿತ್ರೆಗಳ ಅಧ್ಯಯನ ನನ್ನ ಹವ್ಯಾಸ. ಅದರ ಜತೆಗೆ ಅದೇ ತಳಹದಿಯ ಮೇಲೆ - ಹಲವಾರು ಚರಿತ್ರೆ, ಗ್ರಂಥ, ಕಾದಂಬರಿ ಹಾಗೂ ಕಾವ್ಯ ರಚನೆಗಳು ಮಾಡಿ, ಸಾಹಿತ್ಯ ಸರಸ್ವತಿಗೆ ಅಳಿಲು ಸೇವೆ ಸಲ್ಲಿಸಿದವಳು ನಾನು. ನನ್ನ ಕನ್ನಡ-ಮರಾಠಿ ಭಾಷೆಗಳ ಅಭ್ಯಾಸ, ಬರವಣಿಗೆ, ದ್ವಿ-ಭಾಷಾ ಸಾಹಿತ್ಯ ರಚನೆಯಲ್ಲಿ ಒಂದು ಓಘವನ್ನು ಕೊಟ್ಟಿದೆ. ಇದಕ್ಕೆ ನನ್ನ ಕುಲದೈವತ - "ಶ್ರೀ ಕಲ್ಲೊಳ್ಳಿ ವೆಂಕಟೇಶ ದೇವರ" ಅನುಗ್ರಹ, "ಹುಟ್ಟಿದ ಮನೆ - ಕೊಟ್ಟ ಮನೆ"ಗಳ ಗುರು-ಹಿರಿಯರ ಆಶೀರ್ವಾದವೇ ಕಾರಣ. ಈ ಸಾಹಿತ್ಯಾಭ್ಯಾಸ - ಕೃಷಿ ಕಾರ್ಯದಲ್ಲಿಯೇ ನನಗೆ, ಇಸ್ವೀ ಸನ್ ೧೯೯೨ ರಲ್ಲಿ ಕೈ-ಗೋವಿಂದ, ರಘುನಾಥ ದಾಭೋಲಕರ (ಹೇಮಾಡಪಂತ) ಕೃತ - "ಶ್ರೀ ಸಾಯಿ ಸಚ್ಚರಿತ್ರೆ" ಮೂಲ ಮರಾಠಿ ಗ್ರಂಥದ ವಾಚನ - ಅಧ್ಯಯನ ಮಾಡುವ ಸುಯೋಗವು ಒದಗಿ ಬಂದಿತು. ಓದಿದಾಗ ಪುನಃ ಪುನಃ ಓದುವ ಆಸೆ ಹೆಚ್ಚಾಯಿತು. ಓದುತ್ತಾ, ಓದುತ್ತಾ ಈ ಮಹಾನ್ ಗ್ರಂಥದ ರಸಸ್ವಾದನೆ ಎಷ್ಟು ಅವಿಸ್ಮರಣೀಯ ಹಾಗೂ ಮಧುರ ವಾಗಿತ್ತೆಂದರೆ, ತಾನೇ ತಾನಾಗಿ ಸಾಯಿಭಕ್ತಿ - ಪರಮಾನಂದ - ಶಾಂತಿ - ಸಮಾಧಾನದ ಪರಮಾನುಭೂತಿಯ ಅನುಭವವಾಯಿತು. ಆಗ ಇದೇ ಅವಿಸ್ಮರಣೀಯ ಪರಮಾನಂದದ ರಸಸ್ವಾದನೆಯನ್ನು ಮರಾಠಿ ಭಾಷೆಯನ್ನರಿಯದ ಲಕ್ಷಾಂತರ ಕನ್ನಡ ಸಾಯಿ ಭಕ್ತರಿಗೆ ಏಕೆ ಉಣಬಡಿಸಬಾರದು ? ಎಂಬ ವಿಚಾರ ಪ್ರಚೋದಿತವಾಯಿತು. ಮೊದಲಿನಿಂದಲೂ ಒಂದು ಶ್ರೇಷ್ಠ ಗ್ರಂಥ ರಚನೆಯ ಇಚ್ಛೆ ಇದ್ದ ನನಗೆ, ಸ್ವತಂತ್ರ ಗ್ರಂಥ ರಚನೆಯಲ್ಲದಿದ್ದರೂ ತನ್ನ ಮಹಾನ್ ಚರಿತ್ರೆಯ ಮೂಲ ಮರಾಠಿ ಗ್ರಂಥದ (ಓವಿಬದ್ಧ) ತದ್ರೂಪ ಕನ್ನಡಾನುವಾದದ ಗ್ರಂಥ ರಚನೆಮಾಡಲು ಆ ಸಾಯಿನಾಥನು

ನನಗೆ ಪ್ರೇರೇಪಿಸಿದನು. ಅದೇ ರೀತಿಯಲ್ಲಿ ಗ್ರಂಥ ರಚನೆಯನ್ನು ನಿರ್ವಿಘ್ನವಾಗಿ ಪೂರ್ಣಗೊಳಿಸಿ, ನನ್ನನ್ನು ಕೃತಾರ್ಥಳನ್ನಾಗಿಸಿದ್ದಾನೆ.

ಶ್ರೀ ಸದ್ಗುರು ಸಾಯಿನಾಥನ ಕೃಪೆಯಿಂದ ಶ್ರೀ ಸಂಸ್ಥಾನದವರು ಈ ಅನುವಾದಿತ ಗ್ರಂಥವನ್ನು ಮಾನ್ಯಮಾಡಿ ಸಂಸ್ಥಾನದಿಂದಲೇ ಮುದ್ರಿಸಿ - ಪ್ರಕಟಿಸುತ್ತಿರುವುದು ಆ ದಯಾಘನನ ಆಶೀರ್ವಾದವೆಂದೇ ಭಾವಿಸುತ್ತೇನೆ. ಈ ಕಾರ್ಯದಲ್ಲಿ ನನಗೆ ನೆರವಾದ ಸಮಸ್ತ ಸಾಯಿ ಭಕ್ತರಿಗೂ ಶ್ರೀ ಸಂಸ್ಥಾನದವರಿಗೂ ಹೃತ್ಪೂರ್ವಕ - ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಪ್ರಾಸಾದಿಕ ಗ್ರಂಥವು ಸಮಸ್ತ ಕನ್ನಡ ಸಾಯಿ ಭಕ್ತರ ಮನೆ ಮನಗಳಲ್ಲಿ ಪಠಣ - ಶ್ರವಣ - ಪಾರಾಯಣಗೊಂಡು ಸದ್ಗುರು ಸಾಯಿನಾಥನು ಈ ಮೂಲಕ ಸಮಸ್ತ ಸಾಯಿ ಭಕ್ತರಿಗೂ ಸುಖ-ಸಮೃದ್ಧಿ, ಶಾಂತಿ, ಸದ್ವಿಚಾರ, ಸದಾಚಾರ-ಸದ್ಗತಿಗಳನ್ನೀಯಲಿ ಎಂದು ಪ್ರಾರ್ಥಿಸುತ್ತೇನೆ.

ಶ್ರೀಮತಿ ಲಲಿತಾ ದಾ. ಇನಾಮದಾರ

"ಚಂದಾ", ರಜತಗಿರಿ, ಧಾರವಾಡ - ೫೮೦ ೦೦೪.

"ಬುದ್ಧ ಪೌರ್ಣಿಮಾ"

ತಾ || ೧೮ -೦೫-೨೦೦೦